Sri N. M. KOTRABASIAH SOGI (Deputy Minister for Education).—

(*a*) During the year 1969-70 the following are the average number of Non-Government Secoundary Schools which were paid within 5th day of every month ;

(1) Dharwar	...	110
(2) Belgaum	...	80
(3) Bijapur	...	53
(4) North-Kanara	...	66

(*b*) The following are the average number of advance grant bills returned to the schools on account of incomplete information or want of necessary enclosures and not arithmetical mistakes :—

(1) Dharwar	...	25
(2) Belgaum	...	40
(3) Bijapur	...	17
(4) North-Kanara	...	15

ಶ್ರೀ ಡಿ. ಎಸ್. ನಾಡಕರ್ಣಿ.—ನನ್ನ (ಅ) ಪ್ರಶ್ನೆಗೆ ಉತ್ತರ ಕೊಡುತ್ತಾ ಧಾರವಾಡದಿಂದ 25, ಬೆಳಗಾಂನಿಂದ 40, ಬಿಜಾಪುರದಿಂದ 17, ಉತ್ತರಕನ್ನಡದಿಂದ 15 ಬಿಲ್‌ಗಳನ್ನು ವಾಪಸ್ ಮಾಡಲಾಗಿದೆ ಎಂದು ಹೇಳಿದ್ದೀರಿ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಬಿಲ್‌ಗಳನ್ನು ಸಣ್ಣ ಸಣ್ಣ ತಪ್ಪಿನ ಕಾರಣಗಳಿಗೋಸ್ಕರ ವಾಪಸ್ ಮಾಡುತ್ತಿದ್ದರೆ ಅಧಿಕಾರಿಗಳು ಲಂಚ ತೆಗೆದುಕೊಳ್ಳುವುದಕ್ಕೆ ಅನ್ವಡವಾಗುವುದಕ್ಕೆ ಕಾರಣವಾಗುವುದಿಲ್ಲವೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ. - ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ಬಿಲ್‌ಗಳ ಜೊತೆಯಲ್ಲಿ ಆಗತ್ಯವಾಗಿರುವಂಥ ಎನ್‌ಕ್ಲೋಸರ್ಸ್‌ನ್ನು ಹಾಕಿ ಕಳಿಸದೇ ಇರುವುದರಿಂದ ಮತ್ತು ರೆಕಾರ್ಡ್‌ನ್ನು ಸರಿಯಾಗಿ ಬಿರ್ಡ್ ಆಪ್ ಮಾಡದೇ ಇರುವುದರಿಂದ ಬಿಲ್‌ಗಳನ್ನು ವಾಪಸು ಕಳಿಸಬೇಕಾಗುತ್ತದೆ. ಈ ಕಾರಣಕ್ಕಾಗಿ ತಡವಾಗಿದೆ. ಈ ವಿಚಾರದಲ್ಲಿ ನಮ್ಮ ಇಲಾಖೆಯ ಅಧಿಕಾರಿಗಳಿಂದ ಯಾವ ತಪ್ಪೂ ಆಗಿಲ್ಲ.

Mr. SPEAKER.—Now Question Hour is over.

SHORT NOTICE QUESTION AND ANSWER

Filling up of the Posts of Assistant Excise Inspector by P. S. C.

20. Sri M. NAGAPPA (Raichur) —

Will the Minister for Finance, Planning and Youth Welfare be pleased to state :—

(*a*) whether the present Assistant Excise Inspectors have been appointed about two years back ;

(*b*) whether these employees were retrenched from the Mineral Development and Survey Settlement Offices due to the abolition of those offices ;

(*c*) whether it is a fact that Public Service Commission has called for the applications for filling up the vacancies of the posts of Assistant Excise Inspectors ;

(*d*) whether the Government propose to recommend the cases or these employees to be treated as permanent by regularsing theif services;

(*e*) if not, the reasons for the same?

Sri **RAMAKRISHNA HEGDE** (Minister for Finance, Planning and Youth Welfare).—

(*a*) Yes.

(*b*) Not all but some of the candidates appointed are the employees retrenched from the Mineral Development and Survey Settlement Offices.

(*c*) Yes.

(*d*) No.

(*e*) The employees referred to colud be taken only as local candidates pending regularisation of the appointments by Public Service Commission. The Public Service Commission has called for applications for these posts and these employees have to take their chances along with other applicants. Hence Government cannot interfere in the selection by Public Service Commission.

ಶ್ರೀ ಎಂ. ನಾಗಪ್ಪ.—ಈ ನೌಕರರು ಲೋಕಲ್ ಕ್ಯಾಂಡಿಡೇಟ್ಸ್ ಆಗಿದ್ದರು ಎಂಬ ಅಭಿಪ್ರಾಯವನ್ನು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ನನಗೆ ತಿಳಿದ ಮಟ್ಟಿಗೆ ಮಿನರಲ್ ಡೆವಲಪ್‌ಮೆಂಟ್ ಮತ್ತು ಸರ್ವೆ ಸೆಟಲ್‌ಮೆಂಟ್ ಆಫೀಸ್‌ಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಕಾಯಂ ನೌಕರರಾಗಿದ್ದರು. ಈ ಆಫೀಸ್‌ಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಎಷ್ಟು ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿದ್ದರು. ಎಂಬುದನ್ನು ತಿಳಿಸಬೇಕು ಮತ್ತು 1966ನೇ ಇಸವಿಯಲ್ಲಿ ಒಂದು ಗೌರ್ನಮೆಂಟ್ ಆರ್ಡರ್ ಹೊರಡಿಸಿಯಾರು ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿದ್ದಾರೋ ಅವರನ್ನೆಲ್ಲ ಕಾಯಂ ನೌಕರರನ್ನಾಗಿ ಮಾಡಿದರಿ. ಈ ಒಂದು ಆರ್ಡರ್ ಇವರಿಗೂ ಅನ್ವಯವಾಗುತ್ತಿರಲಿಲ್ಲವೇ? ಮತ್ತು ಈ ಆರ್ಡರ್ ಪ್ರಕಾರ ಈ ಎರಡು ಆಫೀಸ್‌ಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರನ್ನೂ ಸಹ ಕಾಯಂ ಮಾಡುವುದಕ್ಕೆ ಸಿದ್ದರಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಮಿನರಲ್ ಡೆವಲಪ್‌ಮೆಂಟ್ ಬೋರ್ಡು ಸರ್ಕಾರದ ಒಂದು ವಿಭಾಗವಲ್ಲ. ಸರ್ವೆ ಅಂಡ್ ಸೆಟಲ್‌ಮೆಂಟ್ ಆಫೀಸ್‌ವಲ್ಲಿ ಕೆಲಸ ಮಾಡುತ್ತಿದ್ದ ಅನೇಕ ಸ್ಥಳೀಯ ಕರ್ಮಚಾರಿಗಳನ್ನು ಕೆಲಸ ಮುಗಿದ ಮೇಲೆ ರಿಟ್ರೆಂಚ್ ಮಾಡಲಾಯಿತು. ನಂತರ ಎಕ್ಸ್‌ಟ್ರೈಜ್ ಡಿಪಾರ್ಟ್‌ಮೆಂಟಿಗೆ 200 ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವ ಸಂದರ್ಭ ಬಂದಾಗ ಈ ಮಿನರಲ್ ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಮತ್ತು ಸರ್ವೆ ಅಂಡ್ ಸೆಟಲ್‌ಮೆಂಟ್ ವಿಭಾಗದಲ್ಲಿ ಕೆಲಸ ಮಾಡಿ ಯಾರು ಯಾರು ರಿಟ್ರೆಂಚ್ ಆಗಿದ್ದಾರೋ ಅವರು ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಲಾಯಿತು. ಮತ್ತು ಅಂತಹವರ ಅರ್ಜಿಗಳಿಗೆ ಪ್ರಿಫರೆನ್ಸ್ ಕೊಡಬೇಕೆಂದು ಸರ್ಕಾರ ದವರು ನಿರ್ಧಾರ ಮಾಡಿದರು.

9-30 A. M.

ಅಂಥವರನ್ನು ಎಕ್ಸ್‌ಟ್ರೈಜ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳಾಗಿ ತೆಗೆದುಕೊಂಡಿದ್ದಾರೆ, ಈಗ ಪಬ್ಲಿಕ್ ಸರ್ವಿಸ್ ಕಮಿಷನ್ ಮುಖಾಂತರ ರಿಕ್ರೂಟ್‌ಮೆಂಟ್ ಆಗಬೇಕಾಗುತ್ತದೆ. ರೂಲ್ಸ್ ಪ್ರಕಾರ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಅರ್ಜಿಯನ್ನು ಕರೆದಿದ್ದಾರೆ. 220 ಪೋಸ್ಟುಗಳಿಗೆ 14 ಸಾವಿರ ಅರ್ಜಿಗಳು ಬಂದಿವೆ. ರೂಲ್ಸ್ ಪ್ರಕಾರ ಪಬ್ಲಿಕ್ ಸರ್ವೀಸ್ ಕಮಿಷನಿನವರು ರಿಕ್ರೂಟ್‌ಮೆಂಟ್ ಮಾಡುತ್ತಾರೆ. ಕೇವಲ ಮಿನರಲ್ ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಮತ್ತು ಸರ್ವೆ ಸೆಟಲ್‌ಮೆಂಟ್ ಆಫೀಸಿನಲ್ಲಿ ಕೆಲವರು ಕೆಲಸ ಮಾಡಿದ್ದಾರೆ ಎನ್ನುವ ಕಾರಣದಿಂದ ಅವರನ್ನು ಪರ್ಮನೆಂಟ್ ಎಂಪ್ಲಾಯೀಸ್ ಎಂದು ಪರಿಗಣಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ನಾಗಪ್ಪ.—ಈಗ ಅವರನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಸೇರಿಸಿಕೊಂಡಿದ್ದೇವು ಎಂದು ಹೇಳಿದ್ದೀರಿ. ತಮ್ಮ ಡಿಪಾರ್ಟ್‌ಮೆಂಟಿನಲ್ಲಿ ಅವರಿಗೆ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಿರಿ. ಅವರನ್ನು ಪರ್ಮನೆಂಟ್ ನೌಕರರೆಂದು ಕಲ್ಪನೆ ಮಾಡಿದ್ದಿರಿ. ಆದರೂ ಸಹ ಈಗ ತಾವು ಯಾವುದೋ ಒಂದು ಕಾರಣದಿಂದ ಅವರನ್ನು ರೋಕಲ್ ಕ್ಯಾಂಡಿಡೇಟ್ಸ್ ಎಂದು ಟ್ರೀಟ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ಈಗ ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ಮತ್ತು ಸರ್ವೆ ಸೆಟಲ್‌ಮೆಂಟ್ ಆಫೀಸ್‌ಗಳಿಂದ ರಿಟ್ರೆಂಚ್ ಆಗಿರುವ ನೌಕರರು ಈಗ ಅಸಿಸ್ಟೆಂಟ್ ಎಕ್ಸೈಜ್ ಇನ್‌ಸ್ಪೆಕ್ಟರುಗಳಾಗಿ ಕೆಲವರು ಕೆಲಸಮಾಡುತ್ತಿದ್ದಾರೆ. ಈ ನೌಕರರು ಈ ಕೆಲಸಕ್ಕೆ ಅರ್ಜಿಯನ್ನು ಹಾಕಿಕೊಂಡಿಲ್ಲ. ಏತಕ್ಕೆಂದರೆ ಅವರು ಪರ್ಮನೆಂಟ್ ಎಂಪ್ಲಾಯೀಸ್ ಎಂದು ಭಾವನೆ ಮಾಡಿಕೊಂಡು ಅವರು ಈ ಕೆಲಸಕ್ಕೆ ಅರ್ಜಿಯನ್ನು ಹಾಕಿಕೊಂಡಿಲ್ಲ. ಆದ್ದರಿಂದ ಈಗ ತಾವು ಅವರನ್ನು ರೋಕಲ್ ಕ್ಯಾಂಡಿಡೇಟ್ಸ್ ಎಂದು ಭಾವನೆ ಮಾಡುವುದಾದರೆ ಅವರಿಗೆ ಮತ್ತೆ ಈ ಹುದ್ದೆಗಳಿಗೆ ಅರ್ಜಿ ಹಾಕಿಕೊಳ್ಳುವುದಕ್ಕೆ ಚೈಮ್ ಎಕ್ಸ್‌ಟೆಂಡ್ ಮಾಡಿ ಅವಕಾಶ ಮಾಡಿಕೊಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಸರ್ವೆ ಅಂಡ್ ಸೆಟ್ಲ್‌ಮೆಂಟ್ ಡಿಪಾರ್ಟ್‌ಮೆಂಟಿನವರನ್ನು ಆ ಹುದ್ದೆಗಳಿಗೆ ನೇಮಕ ಮಾಡುವಾಗಲೇ ಅವರಿಗೆ ಇದು ತಾತ್ಕಾಲಿಕ ನೌಕರಿ ಎಂದು ನಾವು ಸ್ಪಷ್ಟವಾಗಿ ತಿಳಿಸಿದ್ದೇವೆ. ಆದ್ದರಿಂದ ಅವರನ್ನು ಪರ್ಮನೆಂಟ್ ಗವರ್ನಮೆಂಟ್ ಸರ್ವೆಂಟ್ಸ್ ಎಂಬ ಗಣನೆಗೆ ತಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ಮತ್ತು ಸರ್ವೆ ಸೆಟಲ್‌ಮೆಂಟ್ ಆಫೀಸಿನಲ್ಲಿದ್ದ ನೌಕರರನ್ನು ತಾವು ರಿಟ್ರೆಂಚ್ ಮಾಡುವಾಗ ಅವರಿಗೆ ಖಾಯಂ ಕೆಲಸವನ್ನು ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಲ್ಲಿ ಕೊಡುತ್ತೇವೆ ಎಂದು ಹೇಳಿ, ಇವರ ಬಗ್ಗೆ ಹಿಂದೆ ಸರ್ಕಾರದಿಂದ ಸರ್ಕ್ಯುಲರ್ ಹೋಗಿದ್ದು ನಿಜವೇ? ಆ ರೀತಿ ತಾವು ಅವರಿಗೆ ಮಾತುಕೊಟ್ಟಿದ್ದರೆ, ಅವರಿಗೆ ಖಾಯಂ ಆಗಿ ಕೆಲಸ ಕೊಡುವುದಕ್ಕೆ ಆದ್ಯತೆ ಕೊಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಸರ್ವೆ ಅಂಡ್ ಸೆಟಲ್‌ಮೆಂಟ್ ಕೆಲಸ ಮುಗಿದಮೇಲೆ ಅಲ್ಲಿ ಕೆಲಸ ಮಾಡತಕ್ಕ ನೌಕರರು ಸರ್ಕಾರಕ್ಕೆ ಮನವಿ ಮಾಡಿಕೊಂಡಾಗ ಇನ್ನುಮುಂದೆ ಸರ್ಕಾರ ಬೇರೆ ಬೇರೆ ಕೆಲಸಗಳಿಗೆ ರಿಕ್ರೂಟ್‌ಮೆಂಟ್ ಮಾಡುವಾಗ ಅವರಿಗೆ ಅವಕಾಶವನ್ನು ಕೊಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದು ಉಂಟು. ಈ ಭರವಸೆಗೆ ಅನುಗುಣವಾಗಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ರಿಕ್ರೂಟ್‌ಮೆಂಟ್ ಮಾಡುವಾಗ ಬೇರೆ ಅಭ್ಯರ್ಥಿಗಳನ್ನು ಕರೆಯುವಾಗ ಇವರನ್ನ ಕರೆಯುತ್ತಾರೆ, ಅಲ್ಲ ಇವರಿಗೆ ಪ್ರಿಫರೆನ್ಸ್ ಕೊಡುತ್ತಾರೆ. ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಇವರಿಗೆ ಕೆಲಸ ಕೊಟ್ಟಿದ್ದು ತಾತ್ಕಾಲಿಕ ಆದ್ದರಿಂದ ಅವರನ್ನು ಈಗ ಪರ್ಮನೆಂಟ್ ನೌಕರರೆಂದು ಕೆಲಸಕ್ಕೆ ತಗೆದು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದು ನಮ್ಮ ರೂಲ್ಸಿಗೆ ವಿರುದ್ಧವಾಗುತ್ತದೆ.

ಶ್ರೀ ವಿ. ಎಸ್. ಪಾಟೀಲ್.—ಈಗ ತಾವು ಎಷ್ಟೋ ಇರಾಖೆಗಳಲ್ಲಿ ವರ್ಕ್‌ಚಾರ್ಜ್ ನೌಕರರನ್ನ ಇಟ್ಟುಕೊಂಡಿದ್ದೀರಿ. ಅಲ್ಲಿ ಕೆಲಸವೇನೋ ಯಾವಾಗಲೂ ಪರ್ಮನೆಂಟಾಗಿ ಇರುತ್ತದೆ, ಆದರೆ ನೌಕರರನ್ನು ಮಾತ್ರ ಟೆಂಪರರಿಯಾಗಿ ಕೆಲಸಕ್ಕೆ ತಗೆದುಕೊಂಡಿದ್ದೀರಿ. ಈಗ ಉದಾಹರಣೆಗೆ ಹೇಳಬೇಕಾದರೆ ರೋಡ್ ಡೆವಲಪ್‌ಮೆಂಟ್ ಮತ್ತು ರೋಡ್ ರಿಪೇರ್ ಕೆಲಸಗಳು ಪರ್ಮನೆಂಟ್ ಆಗಿರುತ್ತದೆ. ಆದರೆ ಅಲ್ಲಿ ನೌಕರರನ್ನು ಮಾತ್ರ ಟೆಂಪರರಿ ಎಂದು ಇಟ್ಟುಕೊಂಡಿರುತ್ತೀರಿ ಅಂಥವರು ಶಾಶ್ವತವಾಗಿ ಕೆಲಸದಲ್ಲಿ ಇರುವ ಗ್ಯಾರಂಟಿ ಇದೆಯೋ ಅಥವಾ ಇಲ್ಲವೋ?

ಅಧ್ಯಕ್ಷರು.—ಈ ಪ್ರಶ್ನೆಗೆ ಅದು ಸಂಬಂಧಪಡುವುದಿಲ್ಲ.

ಶ್ರೀ ಎನ್. ಹುಚ್ಚವಾಸ್ತಿಗೌಡ.—ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ಒಂದು ಸಂಸ್ಥೆ. ಆದ್ದರಿಂದ ಅಲ್ಲಿ ಕೆಲಸ ಮಾಡತಕ್ಕ ನೌಕರರು ಖಾಯಂ ಆದ ನೌಕರರು. ಈಗ ತಾವು ಮಿನರಲ್ ಡೆವಲಪ್‌ಮೆಂಟ್ ಬೋರ್ಡನ್ನು ಅಬಾಲಿಷ್ ಮಾಡಿದ್ದೀರಿ, ಅಲ್ಲಿದ್ದ ನೌಕರರನ್ನ ರಿಟ್ರೆಂಚ್ ಮಾಡಿದ್ದೀರಿ. ಈಗ ಮಿನರಲ್ ಡೆವಲಪ್‌ಮೆಂಟ್ ಬೋರ್ಡಿಗೆ ಬದಲಾಗಿ ಸ್ಥಾಪಿಸಿರತಕ್ಕ ಸಂಸ್ಥೆಯಲ್ಲಿ ಆ ನೌಕರರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದಕ್ಕೆ ಏನು ಅಡ್ಡಿ ಇದೆ, ಮತ್ತು ಸರ್ವೆ ಅಂಡ್ ಸೆಟಲ್‌ಮೆಂಟ್ ಆಫೀಸಿನಲ್ಲಿ ರಿಟ್ರೆಂಚ್ ಆಗಿರುವವರನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಈಗ ಹೊಸದಾಗಿ ಕೆಲಸಕ್ಕೆ ನೌಕರನನ್ನು ಚುನಾಯಿಸಿಕೊಳ್ಳತಕ್ಕ ಸಂದರ್ಭದಲ್ಲಿ ಅವರಿಗೆ ಪ್ರಿಫರೆನ್ಸ್ ಕೊಡುತ್ತೇವೆಂದು ಸರ್ಕಾರದವರು ಅವರಿಗೆ ತಿಳಿಸಿದ್ದರೆ. ಆ ರೀತಿ ಅವರಿಗೆ ಪ್ರಿಫರೆನ್ಸ್ ಕೊಡುವುದಕ್ಕೆ ಅಡ್ಡಿ ಏನಿದೆ, ಅಡ್ಡಿ ಇಲ್ಲದಿದ್ದರೆ ಅವರಿಗೆ ಪ್ರಿಫರೆನ್ಸ್ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಮೈನರರ್ ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಕೆಲಸ ಮಾಡತಕ್ಕ ನೌಕರರನ್ನು ಪರ್ಮನೆಂಟಾಗಿ ನೇಮಕಮಾಡಿಕೊಂಡಿದ್ದರೆ ಅವರನ್ನ ರಿಟ್ರೆಂಚ್ ಮಾಡತಕ್ಕ ಪ್ರಶ್ನೆಯೇ ಬರುತ್ತಿರಲಿಲ್ಲ. ಬೇರೆ ಡಿಪಾರ್ಟ್‌ಮೆಂಟಿಗೆ ವರ್ಗಮಾಡುತ್ತಿದ್ದೆವು. ಆದರೆ ಒಂದು ಸಲ ರಿಟ್ರೆಂಚ್ ಮಾಡಿದಮೇಲೆ ಪುನಃ ನೌಕರಿಗೆ ನೇಮಿಸಿಕೊಳ್ಳುವಾಗ ಯಾವ ನಿಯಮವನ್ನು ಹಾಕಿಕೊಂಡಿದ್ದೇವೋ ಆ ನಿಯಮವನ್ನು ಅನುಸರಿಸಿ ನೌಕರರನ್ನು ನೇಮಿಸಿಕೊಳ್ಳುತ್ತೇವೆ. ಸರ್ಕಾರದವರು ನೇರವಾಗಿ ನೌಕರರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಮತ್ತು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರಿಗೆ ನಾವು ಇಂಥವರನ್ನೇ ನೇಮಕಮಾಡಿ ಎಂದು ಆದೇಶ ಕೊಡುವುದಕ್ಕೆ ಸಾಧ್ಯವಿಲ್ಲ. ನಿಯಮಾವಳಿಗನುಸಾರವಾಗಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಇಷ್ಟಿಷ್ಟು ಎಂದು ರಿಜರ್ವೇಷನ್ ಮಾಡಬೇಕು, ಅರ್ಹತೆ ಇರಬೇಕು ಇದನ್ನೆಲ್ಲಾ ನೋಡಿಕೊಂಡು ಅವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಎಚ್. ಬಿ. ಬ್ಯಾಲಹುನ್ನಿ.—ಅನೇಕ ಸಂದರ್ಭಗಳಲ್ಲಿ ಲೋಕಲ್ ಕ್ಯಾಂಡಿಡೇಟ್‌ಗಳನ್ನು ರೆಗ್ಯುಲರೈಜ್ ಮಾಡುವಂಥಾ ಸಂದರ್ಭದಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರನ್ನು ಕೇಳಿ ಮಾಡುವುದಿಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ಕೆಲವೊಂದು ಸಂದರ್ಭದಲ್ಲಿ ರೆಗ್ಯುಲರೈಜ್ ಮಾಡತಕ್ಕ ಸಂದರ್ಭ ಬಂದಿದೆ. 2-3 ವರ್ಷಗಳ ಹಿಂದೆ ಲೋಕಲ್ ಕ್ಯಾಂಡಿಡೇಟ್‌ಗಳ ಸಂಖ್ಯೆ ಹೆಚ್ಚಾಗಿದ್ದು ಅವರು 4-5 ವರ್ಷಗಳಿಂದ ಲೋಕಲ್ ಕ್ಯಾಂಡಿಡೇಟ್‌ಗಳಾಗಿ ಕೆಲಸ ಮಾಡುತ್ತಿದ್ದುದರಿಂದ ಅಂಥವರನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರ ಅಭಿಪ್ರಾಯವನ್ನು ಪಡೆದು ನೇಮಕ ಮಾಡಿದ್ದೇವೆ.

ಶ್ರೀಮತಿ ಚಂಪಾಬಾಯಿ ಭೋಗರೆ.—ಸರ್ವೆ ಅಂಡ್ ಸೆಟ್ಲ್‌ಮೆಂಟ್ ಆಫೀಸಿನಲ್ಲಿ ರಿಟ್ರೆಂಚ್ ಆದವರನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿಗೆ ತೆಗೆದುಕೊಂಡಿದ್ದೀರಿ. ಅವರಿಗೆ ಈಗಾಗಲೇ 3 ವರ್ಷ ಸರ್ವೀಸ್ ಆಗಿದೆ. ಅವರ ಗತಿ ಏನು? ಈಗ ಮತ್ತೆ ಅವರನ್ನು ಕೆಲಸದಿಂದ ತೆಗೆದರೆ ಅವರಿಗೆ ಏನು ಪ್ರಯತ್ನ ಮಾಡುತ್ತೀರಿ, ಅವರ ಗತಿ ಏನು?

ಶ್ರೀ ರಾಮಕೃಷ್ಣ ಹೆಗಡೆ.—ದೇವರೇ ಗತಿ. ಸರ್ಕಾರದವರು ನೇರವಾಗಿ ಅವರನ್ನು ಆ ಕೆಲಸಕ್ಕೆ ನೇಮಿಸುವಾಗ ಅದು ತಾತ್ಕಾಲಿಕವಾದದ್ದು ಅದನ್ನು ಖಾಯಂಮಾಡುವಾಗ ಪಬ್ಲಿಕ್ ಸರ್ವೀಸ್ ಕಮಿಷನ್ ಮುಖಾಂತರ ನೇಮಕ ಮಾಡಬೇಕು ಎಂದು ಸ್ಪಷ್ಟ ಮಾಡಿದಮೇಲೂ ಅವರ ಗತಿ ಏನು ಎಂದರೆ ನಾನು ಏನು ಹೇಳಿವುದಕ್ಕೆ ಸಾಧ್ಯವಾಗುತ್ತದೆ? ಇದು ನಮ್ಮ ದೇಶದಲ್ಲಿ ಮಾತ್ರ ಇಂಥಾ ಒಂದು ಪ್ರವೃತ್ತಿ ಇದೆ. ಬೇರೆ ಕಡೆ 2 ವರ್ಷ ಕೆಲಸ ಸಿಕ್ಕಲಿ. ಸಿಕ್ಕಿದಷ್ಟು ದಿವಸ ಕೆಲಸ ಮಾಡುತ್ತಾರೆ. ಮತ್ತೆ ಬೇರೆ ಕಡೆಗೆ ಕೆಲಸಕ್ಕೆ ಹೋಗುತ್ತಾರೆ.

ಶ್ರೀ ಎಂ. ಎನ್. ರಾಮಣ್ಣ.—ಈಗಾಗಲೇ ಅವರಿಗೆ ಒಂದು ಸಲ ರಿಟ್ರೆಂಚ್ ಮಾಡಿ ಎರಡನೆಯ ಸಲ ಕೆಲಸ ಕೊಟ್ಟಿದ್ದೀರಿ. ಈಗ ಮತ್ತೆ ಅವನ್ನ ಕೆಲಸದಿಂದ ತೆಗೆದರೆ ಅವರಿಗೆ ಬೇರೆ ಕೆಲಸ ಸಿಕ್ಕುವುದಿಲ್ಲ. ಆದ್ದರಿಂದ ಒಂದು ಸಲ ರಿಟ್ರೆಂಚ್ ಮಾಡಿ ಮತ್ತೆ ಅಪಾಯಿಂಟ್ ಮಾಡಿದಮೇಲೆ ಅವರನ್ನು ಅಬ್ಸಾರ್ಬ್ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಆ ರೀತಿ ಮಾಡಿಕೊಳ್ಳುತ್ತೇವೆ ಎಂದು ಹೇಳುವುದು ಸ್ವಲ್ಪ ಕಷ್ಟವಾಗುತ್ತದೆ. ಏತಕ್ಕೆಂದರೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ನೇರವಾಗಿ ಆಯ್ಕೆ ಮಾಡುವಾಗ ನಾವು ಇಂಥವರನ್ನೇ ನೇಮಕಮಾಡಿ ಎಂದು ಹೇಳಿದರೆ ಅದರಿಂದ ಸರ್ಕಾರಕ್ಕೆ ಆಕ್ಷೇಪಣೆ ಬರುತ್ತದೆ. ನಾನು ವೈಯಕ್ತಿಕವಾಗಿ ಹೇಳುವುದಾದರೆ ಅವರು ನನ್ನ ಮನೆಗೆ ಬಂದರೆ ಕೆಲಸ ಕೊಡಿಸಲು ಪ್ರಯತ್ನಿಸುವೆ. ಆದರೆ ಸರ್ಕಾರದ ನಿಯಮಕ್ಕೆ ವಿರುದ್ಧವಾಗಿ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಈಗತಾನೆ ತಾವು ಹೇಳಿದಿರಿ ಸಾಧಾರಣವಾಗಿ 4-5 ವರ್ಷಗಳಿಂದ ಕೆಲಸ ಮಾಡಿದಂತಹ ಲೋಕಲ್ ಕ್ಯಾಂಡಿಡೇಟ್ಸ್ ಹೆಚ್ಚು ಸಂಖ್ಯೆಯಲ್ಲಿ ಇದ್ದರು. ಆದ್ದರಿಂದ ಅವರನ್ನು ಪರ್ಮನೆಂಟ್ ಮಾಡಬೇಕು ಎಂದು ಹಿಂದೆ ಒಂದು ಆಜ್ಞೆಯನ್ನು ಹೊರಡಿಸಿದ್ದೆವು ಎಂದು ಹೇಳಿದಿರಿ. ತಗಲೂ ಆ ಒಂದು ಪರಿಸ್ಥಿತಿ ಬಂದಿದೆ. ಈಗ ಸುಮಾರು 8-10 ವರ್ಷಗಳಿಂದ ಟೆಂಪರರಿಯಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಬೇರೆ ಯಾವ ಕೆಲಸವೂ ಸಿಕ್ಕದ ಪರಿಸ್ಥಿತಿ ಬಂದಿದೆ, ಅವರ ಗತಿ ಏನು?

ಅದಕ್ಕಾಗಿ ಕನಿಷ್ಠಪಕ್ಷ ತಾವು 200 ಅಥವಾ 500 ಜನರಿಗಾದರೂ ರೆಗ್ಯುಲರೈಜ್ ಮಾಡಿ ಹಿಂದೆ ಕೊಟ್ಟಂಥ ಅನುಕೂಲವನ್ನು ಅವರಿಗೆ ಒದಗಿಸುವುದಕ್ಕೆ ಸಾಧ್ಯ ಇಲ್ಲವೇ! ಸಾಧ್ಯ ಇಲ್ಲದಿದ್ದರೆ ಮಂತ್ರಿ ಮಂಡಲವನ್ನು ಎಕ್ಸ್‌ಟೆಂಡ್ ಮಾಡಿ 4—6 ಜನ ಮಂತ್ರಿಗಳನ್ನು ಹೆಚ್ಚಿಸಿದರೆ ಅವರಿಗೆ ಬೇಕಾದಂಥ ಪ್ರೈವೇಟ್ ಸೆಕ್ರೆಟರಿ, ಪರ್ಸನಲ್ ಅಸಿಸ್ಟೆಂಟ್ ಅವರನ್ನು ಸೇರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಅದನ್ನಾದರೂ ಯೋಚನೆಮಾಡಿ ಅವರಿಗೆ ಕೆಲಸ ಕೊಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ತಾತ್ಕಾಲಿಕ ನೌಕರರ ಪ್ರಶ್ನೆ ಸರಕಾರದ ಮುಂದೆ ಇದೆ. ಅದು ಜನರಲ್ ಸಮಸ್ಯೆ. ಅದರ ಮೇಲೆ ನಿರ್ಣಯವಾದರೆ ಅವರಿಗೂ ಕೂಡ ಪ್ರಯೋಜನ ವಾಗುತ್ತದೆಯೇ ಇಲ್ಲವೋ ಗೊತ್ತಿಲ್ಲ. ಅವರಿಗೆ ಪ್ರಯೋಜನವಾದರೆ ಸಂತೋಷ. ಅವರಿಗೆ ಪ್ರಯೋಜನವಾಗದಿದ್ದರೆ ವಿಷಾದಿಸುತ್ತೇನೆ.

Mr. SPEAKER.—Question Hour is over.

QUESTIONS FOR ANSWERS ON THE DAY

(but not taken up)

Conversion of Tenure of Paragana Lands in Gokak Taluk

186. Sri L. S. NAIK (Gokak).—

Will the Minister for Revenue be pleased to state :—

(*a*) whether they are contemplating to extend the time limit for depositing the premium for conversion of tenure of Paragana (Deshpande, Inam, Desai, etc.,) lands in Gokak Taluk;

(*b*) the extent of such lands remaining in Gokak taluk (information including the extent of land may please be furnished) ?

Sri H. V. KOUJALGI (Minister for Revenue).—

(*a*) No.

(*b*) 5,255 Acres and 28 Guntas. According to the Bombay Paragana and Kulkarni Inam Abolition Act, 1950, 3,634 acres and 18 Guntas and according to the Mysore Village Officers Abolition Act, 1961, acres and 10 Guntas of lands are remaining.

Smuggling and Blackmarketing in Cement and Blasting Material of Suvarnavathi Project

230. Sri S. PUTTASWAMY (Chamarajanagar).—

Will the Chief Minister be pleased to state :—

(*a*) whether it has come to the notice of the Government that blasting materials and cement are heavily smuggled and blackmarketed in Suvarnavathi Project due to the collusion of both project Officers and the Contractor ;

(*b*) whether the Government would hold an enquiry regarding these and punish the culprits and recover the bungled amount ?

Sri VEERENDRA PATIL (Chief Minister).—

(*a*) No.

(*b*) Does not arise in view of reply *Vide* (*a*) above.